All India Radio: Bangalore
National Bulletin In Kannada
19.03.2026  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದಿನಿಂದ ಮೂರು ದಿನ ಉತ್ತರ ಪ್ರದೇಶಕ್ಕೆ ಭೇಟಿ; ಅಯೋಧ್ಯೆಯಲ್ಲಿಂದು ವಿವಿಧ ಧಾರ್ಮಿಕ ಕಾರ್ಯಗಳಲ್ಲಿ ಭಾಗಿ
2. ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಗಳು-೨೦೦೮ ರ ತಿದ್ದುಪಡಿ ಕುರಿತು ಸರ್ಕಾರ ಅಧಿಸೂಚನೆ ; ಟೋಲ್ ಅನುಸರಣೆ ಮತ್ತು ಡಿಜಿಟಲ್ ಜಾರಿಗೆ ಬಲ
3. ಇರಾನ್ ನ ಅತಿದೊಡ್ಡ ನೈಸರ್ಗಿಕ ಅನಿಲ ಸೌಲಭ್ಯಗಳ ಮೇಲೆ ಅಮೆರಿಕ-ಇಸ್ರೇಲ್ ದಾಳಿ ; ಪಶ್ಚಿಮ ಏಷ್ಯಾದ್ಯಂತ  ಉದ್ವಿಗ್ನತೆ ಇನ್ನಷ್ಟು ತೀವ್ರ
4. ಆರ್ಲಿಯನ್ಸ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿ; ಪ್ರಿ ಕ್ವಾರ್ಟರ್ ಫೈನಲ್ಸ್ ಗೆ ಆಯುಷ್ ಶೆಟ್ಟಿ ಮುನ್ನಡೆ

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ಅಯೋಧ್ಯೆಗೆ ಭೇಟಿ ನೀಡಲಿದ್ದಾರೆ. ೩ ದಿನಗಳ ಉತ್ತರ ಪ್ರದೇಶ ಪ್ರವಾಸದಲ್ಲಿ ಅವರು ಮೊದಲು ಅಯೋಧ್ಯೆಗೆ ತಲುಪಿ ಶ್ರೀ ರಾಮ ಜನ್ಮಭೂಮಿ ಮಂದಿರಕ್ಕೆ ಭೇಟಿ ನೀಡಲಿದ್ದಾರೆ. ನಂತರ ಅವರು, ರಾಮ ಜನ್ಮಭೂಮಿ ಮಂದಿರದ ವಿವಿಧ ಸ್ಥಳಗಳಲ್ಲಿ ದರ್ಶನ ಮತ್ತು ಆರತಿ ನೆರವೇರಿಸಲಿದ್ದಾರೆ ಮತ್ತು ಶ್ರೀ ರಾಮ ಯಂತ್ರ ಸ್ಥಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ರಾಷ್ಟ್ರಪತಿ ಅವರು, ಮಥುರಾ ಬೃಂದಾವನಕ್ಕೆ ತೆರಳಲಿದ್ದಾರೆ. ಅಲ್ಲಿ ಅವರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಮತ್ತು ದರ್ಶನ ಮತ್ತು ಪೂಜೆ ನೆರವೇರಿಸಲಿದ್ದಾರೆ. ಹಿಂದೂ ಹೊಸ ವರ್ಷ ಎಂದೂ ಕರೆಯಲ್ಪಡುವ ಚೈತ್ರ ನವರಾತ್ರಿಯ ಮೊದಲ ದಿನ ಅಯೋಧ್ಯೆಯಲ್ಲಿ ರಾಷ್ಟ್ರಪತಿಗಳು ರಾಮ ಮಂದಿರದಲ್ಲಿ ವೈದಿಕ ಆಚರಣೆಗಳಲ್ಲಿ ಭಾಗವಹಿಸಲಿದ್ದಾರೆ ಹಾಗೂ ದೇವಾಲಯದ ಎರಡನೇ ಮಹಡಿಯಲ್ಲಿ ಶ್ರೀ ರಾಮಯಂತ್ರದ ಸ್ಥಾಪನೆಗೆ ಹಾಜರಾಗಲಿದ್ದಾರೆ.

<><><><>

ಟೋಲ್ ಅನುಸರಣೆ ಮತ್ತು ಡಿಜಿಟಲ್ ಜಾರಿಯನ್ನು ಬಲಪಡಿಸಲು ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಗಳು, ೨೦೨೮ ರ ತಿದ್ದುಪಡಿ ಕುರಿತು ಸರ್ಕಾರ ಅಧಿಸೂಚನೆ ಹೊರಡಿಸಿದೆ. ತಿದ್ದುಪಡಿಯು ಪಾವತಿಸದ ಬಳಕೆದಾರರ ಶುಲ್ಕದ ಪ್ರಕರಣಗಳಲ್ಲಿ ರಚನಾತ್ಮಕ ವಸೂಲಾತಿ ಕಾರ್ಯವಿಧಾನವನ್ನು ಒದಗಿಸುತ್ತದೆ ಮತ್ತು ಟೋಲ್ ಸಂಗ್ರಹದ ಡಿಜಿಟಲ್ ಜಾರಿಯನ್ನು ಬಲಪಡಿಸಲು ಪರಿಚಯಿಸಲಾಗಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹೇಳಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬಳಕೆದಾರರ ಶುಲ್ಕದ ಪರಿಣಾಮಕಾರಿ ಮತ್ತು ಪಾರದರ್ಶಕ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಇದು ಹೊಂದಿದೆ. ನಿಯಮ ೧೪ ರ ಅಡಿಯಲ್ಲಿ ಸೂಚಿಸಲಾದ ಪಾವತಿಸದ ಬಳಕೆದಾರರ ಶುಲ್ಕಕ್ಕಾಗಿ ರಚನಾತ್ಮಕ ಮರುಪಡೆಯುವಿಕೆ ಕಾರ್ಯವಿಧಾನವು ತಂತ್ರಜ್ಞಾನ ಚಾಲಿತ ಎಲೆಕ್ಟ್ರಾನಿಕ್ ನೋಟಿಸ್ ವ್ಯವಸ್ಥೆಯನ್ನು ಒಳಗೊಂಡಿದೆ. ಇದರಲ್ಲಿ ವಾಹನದ ವಿವರಗಳು, ಹಾದುಹೋಗುವ ದಿನಾಂಕ ಮತ್ತು ಸ್ಥಳ ಮತ್ತು ಪಾವತಿಸಬೇಕಾದ ಮೊತ್ತವನ್ನು ನಿರ್ದಿಷ್ಟಪಡಿಸುವ ನೋಂದಾಯಿತ ವಾಹನದ ಮಾಲೀಕರಿಗೆ ಎಲೆಕ್ಟ್ರಾನಿಕ್ ನೋಟಿಸ್ ಗಳನ್ನು ನೀಡಲಾಗುತ್ತದೆ. ತಿದ್ದುಪಡಿಯ ಪ್ರಕಾರ, ಇ-ನೋಟಿಸ್ ಗೆ ಪ್ರತಿಕ್ರಿಯೆಯಾಗಿ ಪಾವತಿಸಬೇಕಾದ ಪಾವತಿಸದ ಬಳಕೆದಾರರ ಶುಲ್ಕವು ಅನ್ವಯವಾಗುವ ಟೋಲ್ ಮೊತ್ತಕ್ಕಿಂತ ಎರಡು ಪಟ್ಟು ಹೆಚ್ಚಾಗಿರುತ್ತದೆ.

<><><><>

ಇರಾನ್ ನಲ್ಲಿರುವ ವಿಶ್ವದ ಅತಿದೊಡ್ಡ ನೈಸರ್ಗಿಕ ಅನಿಲ ಕ್ಷೇತ್ರಕ್ಕೆ ಸಂಬಂಧಿಸಿದ ಸೌಲಭ್ಯಗಳು ಅಮೆರಿಕ-ಇಸ್ರೇಲ್ ಸಮನ್ವಯದ ದಾಳಿಗೆ ಒಳಪಟ್ಟಿದ್ದರಿಂದ ಪಶ್ಚಿಮ ಏಷ್ಯಾದ್ಯಂತ ಉದ್ವಿಗ್ನತೆ ಇನ್ನಷ್ಟು ತೀವ್ರಗೊಂಡಿದೆ. ಅಸಲುಯೆಹ್ ವಿಶೇಷ ಆರ್ಥಿಕ ಇಂಧನ ವಲಯದಲ್ಲಿನ ಅನಿಲ ಸಂಸ್ಕರಣಾ ಘಟಕಗಳು ಮತ್ತು ಪೆಟ್ರೋಕೆಮಿಕಲ್ ಸ್ಥಾಪನೆಗಳನ್ನು ಗುರಿಯಾಗಿಸಲಾಗಿದೆ. ಇದು ದಕ್ಷಿಣ ಪಾರ್ಸ್ ಕ್ಷೇತ್ರದ ಪ್ರಮುಖ ಹಂತಗಳನ್ನು ಅಡ್ಡಿಪಡಿಸುತ್ತದೆ ಮತ್ತು ಉತ್ಪಾದನೆಯನ್ನು ನಿಲ್ಲಿಸುತ್ತದೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಫೆಬ್ರವರಿ ೨೮ ರಂದು ಸಂಘರ್ಷ ಪ್ರಾರಂಭವಾದ ನಂತರ ಇರಾನ್ ನ ಅಪ್ ಸ್ಟ್ರೀಮ್ ಇಂಧನ ಮೂಲಸೌಕರ್ಯದ ಮೇಲೆ ಮೊದಲನೇಯ ನೇರ ಇಸ್ರೇಲ್ ದಾಳಿ ಇದಾಗಿದೆ. ಈ ದಾಳಿಯು ಇರಾನ್ ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ನಿಂದ ತಕ್ಷಣದ ಎಚ್ಚರಿಕೆಗಳನ್ನು ಪ್ರಚೋದಿಸಿದೆ.ಅಲ್ಲದೆ,

ಇದುಜಾಗತಿಕ ಇಂಧನ ಭದ್ರತೆಗೆ ಬೆದರಿಕೆ ಹಾಕುವ ಅಪಾಯಕಾರಿ ಉಲ್ಬಣಗಳು ಎಂದು ಖಂಡಿಸಿವೆ. ಈ ದಾಳಿಯು ಇಸ್ರೇಲ್ ಮೇಲೆ ಇರಾನಿನ ಕ್ಷಿಪಣಿ ದಾಳಿ ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಇಂಧನ ಹರಿವನ್ನು ಮತ್ತಷ್ಟು ಅಡ್ಡಿಪಡಿಸಲು ಕಾರಣವಾಗಬಹುದು ಎಂದು ಹೇಳಲಾಗಿದೆ.

<><><>

ಜಾಹೀರಾತು ಕೇವಲ ಜನರನ್ನು ತಲುಪುವುದಷ್ಟೇ ಅಲ್ಲ, ಅದು ವಿಶ್ವಾಸವನ್ನು ನಿರ್ಮಿಸಬೇಕು ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಜಾಜು ಹೇಳಿದ್ದಾರೆ. ಮುಂಬೈನಲ್ಲಿ ನಿನ್ನೆ ನಡೆದ ಆಡ್‌ಟ್ರಸ್ಟ್ ಶೃಂಗಸಭೆ ೨೦೨೬ ರಲ್ಲಿ ಪ್ರಧಾನ ಭಾಷಣ ಮಾಡಿದ ಅವರು, ಭಾರತದಲ್ಲಿ ಜಾಹೀರಾತು ವಲಯವು ವ್ಯಾಪ್ತಿ, ಸಂಕೀರ್ಣತೆ ಮತ್ತು ಪ್ರಭಾವದಲ್ಲಿ ಬೆಳೆಯುತ್ತಿರುವ ಈ ಸಮಯದಲ್ಲಿ, ಜವಾಬ್ದಾರಿಯುತ, ಪಾರದರ್ಶಕ ಮತ್ತು ವಿಶ್ವಾಸಾರ್ಹ ಜಾಹೀರಾತು ಪರಿಸರ ವ್ಯವಸ್ಥೆಯ ತುರ್ತು ಅಗತ್ಯವನ್ನು ಪ್ರತಿಪಾದಿಸಿದರು. ಈ ವಲಯವು ಬೆಳವಣಿಗೆಯನ್ನು ಮುಂದುವರಿಸಬೇಕು, ಆದರೆ ವಿಶೇಷವಾಗಿ ಡಿಜಿಟಲ್ ಕ್ಷೇತ್ರದಲ್ಲಿ ಹೊಣೆಗಾರಿಕೆಯೂ ಇರಬೇಕು ಎಂದು ಒತ್ತಿ ಹೇಳಿದ ಅವರು, ವಾರ್ತಾ ಮತ್ತು ಪ್ರಸಾರ ಸಚಿವಾಲಯದ ದೃಷ್ಟಿಕೋನವು ವಿಶ್ವಾಸವನ್ನು ಬೆಳೆಸುವುದು, ಬೆಳವಣಿಗೆಯನ್ನು ಬೆಂಬಲಿಸುವುದು ಮತ್ತು ಜವಾಬ್ದಾರಿಯನ್ನು ಖಚಿತಪಡಿಸಿಕೊಳ್ಳುವುದರ ಮೇಲೆ ಕೇಂದ್ರೀಕರಿಸಿದೆ ಎಂದು ತಿಳಿಸಿದರು.

<><><>

ಚೈತ್ರ ನವರಾತ್ರಿಯ ಹಬ್ಬವು ಇಂದು ಪ್ರಾರಂಭವಾಗಿದ್ದು, ದೇಶಾದ್ಯಂತ ಭಕ್ತರು ಒಂಬತ್ತು ಶುಭ ದಿನಗಳನ್ನು ಬಹಳ ಉತ್ಸಾಹ ಮತ್ತು ಭಕ್ತಿಯಿಂದ ಆಚರಿಸಲಿದ್ದಾರೆ. ಒಂಬತ್ತು ದಿನಗಳ ಉತ್ಸವವು ರಾಷ್ಟ್ರ ರಾಜಧಾನಿ ಸೇರಿದಂತೆ ದೇವಾಲಯಗಳಲ್ಲಿ ಬೆಳಗಿನ ಆರತಿ ಅರ್ಪಿಸುವ ಮೂಲಕ ಪ್ರಾರಂಭವಾಗಿದೆ. ಅಲ್ಲಿ ಹೆಚ್ಚಿನ ಸಂಖ್ಯೆಯ ಭಕ್ತರು ಆಶೀರ್ವಾದ ಪಡೆಯಲು ಸರದಿ ಸಾಲಿನಲ್ಲಿ ನಿಂತಿರುವುದು ಸಾಮಾನ್ಯವಾಗಿದೆ.

<><><>

ಒಂದು ತಿಂಗಳ ಕಾಲ ನಡೆಯುವ ಉತ್ತರವಾಹಿನಿ ನರ್ಮದಾ ಪರಿಕ್ರಮ ಗುಜರಾತ್ ನಲ್ಲಿ ಇಂದು ಪ್ರಾರಂಭವಾಗಲಿದೆ. ಪವಿತ್ರ ನರ್ಮದಾ ನದಿಯ ಉದ್ದಕ್ಕೂ ೩೦ ಕಿಲೋಮೀಟರ್ ಆಧ್ಯಾತ್ಮಿಕ ಪ್ರಯಾಣಕ್ಕಾಗಿ ಭಾರತದಾದ್ಯಂತದ ಲಕ್ಷಾಂತರ ಭಕ್ತರು ಸೇರಲಿದ್ದಾರೆ. ರಾಜ್ಯ ಸರ್ಕಾರವು

ಕಡ್ಡಾಯ ಡಿಜಿಟಲ್ ನೋಂದಣಿ ವ್ಯವಸ್ಥೆಯನ್ನು ಪರಿಚಯಿಸಿದೆ ಮತ್ತು ಯಾತ್ರಾರ್ಥಿಗಳಿಗೆ ಅನುಕೂಲವಾಗುವಂತೆ ಆಧುನಿಕ ಸೌಲಭ್ಯಗಳನ್ನು ಸ್ಥಾಪಿಸಿದೆ ಎಂದು ನಮ್ಮ ಬಾತ್ಮೀದಾರರು ತಿಳಿಸಿದ್ದಾರೆ.

<><><><>

ಚೀನಾ, ರಷ್ಯಾ ಮತ್ತು ಪಾಕಿಸ್ತಾನದ ದೂರಗಾಮಿ ಬ್ಯಾಲಿಸ್ಟಿಕ್ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮವು ಅಮೆರಿಕಕ್ಕೆ ಅತ್ಯಂತ ಮಹತ್ವದ ಬೆದರಿಕೆಯಾಗಬಹುದು ಎಂದು ಅಮೆರಿಕದ ಗುಪ್ತಚರ ಮುಖ್ಯಸ್ಥೆ ತುಳಸಿ ಗಬ್ಬಾರ್ಡ್ ಹೇಳಿದ್ದಾರೆ. ಸೆನೆಟ್ ಗುಪ್ತಚರ ಸಮಿತಿಯ ಮುಂದೆ ನೀಡಿದ ಸಾಕ್ಷ್ಯದಲ್ಲಿ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ ಗಬ್ಬಾರ್ಡ್, ಅಮೆರಿಕಕ್ಕೆ ಪ್ರಸ್ತುತ ೩,೦೦೦ ಕ್ಕೂ ಹೆಚ್ಚು ಕ್ಷಿಪಣಿಗಳಿಂದ ೨೦೩೫ ರ ವೇಳೆಗೆ ೧೬,೦೦೦ ಕ್ಕೂ ಹೆಚ್ಚು ಕ್ಷಿಪಣಿಗಳಿಗೆ ವಿಸ್ತರಿಸುವ ಬೆದರಿಕೆಗಳು ಸಜ್ಜಾಗಿದೆ ಎಂದು ಹೇಳಿದ್ದಾರೆ. ಕಾರ್ಯತಂತ್ರದ ಬೆದರಿಕೆಗಳ ವಿರುದ್ಧ ತಾಯ್ನಾಡಿನಲ್ಲಿ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಮೆರಿಕ ಸುರಕ್ಷಿತ ಪರಮಾಣು ನಿರೋಧಕವನ್ನು ಮುಂದುವರಿಸಿದೆ. ಆದಾಗ್ಯೂ, ರಷ್ಯಾ, ಚೀನಾ, ಉತ್ತರ ಕೊರಿಯಾ, ಇರಾನ್ ಮತ್ತು ಪಾಕಿಸ್ತಾನ, ಅಮೆರಿಕವನ್ನು ವ್ಯಾಪ್ತಿಯೊಳಗೆ ಇರಿಸುವ ಪರಮಾಣು ಮತ್ತು ಸಾಂಪ್ರದಾಯಿಕ ಪೇಲೋಡ್ ಗಳೊಂದಿಗೆ ನವೀನ, ಸುಧಾರಿತ ಅಥವಾ ಸಾಂಪ್ರದಾಯಿಕ ಕ್ಷಿಪಣಿ ವಿತರಣಾ ವ್ಯವಸ್ಥೆಗಳ ಶ್ರೇಣಿಯನ್ನು ಸಂಶೋಧಿಸುತ್ತಿವೆ ಮತ್ತು ಅಭಿವೃದ್ಧಿಪಡಿಸುತ್ತಿವೆ ಎಂದು ಹೇಳಿದ್ದಾರೆ.

<><><><>

ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್ ಪ್ರೆಸ್ ಇಂದು ಒಟ್ಟು ೪೮ ನಿಗದಿತ ವಿಮಾನಗಳನ್ನು ಪಶ್ಚಿಮ ಏಷ್ಯಾ ಪ್ರದೇಶ ಮತ್ತು ಭಾರತದ ನಡುವೆ ನಿರ್ವಹಿಸಲಿವೆ ಎಂದು ಹೇಳಿದೆ. ಎರಡೂ ವಿಮಾನಯಾನ ಸಂಸ್ಥೆಗಳು ಭಾರತ ಮತ್ತು ಜೆಡ್ಡಾ ನಡುವಿನ ೧೬ ವಿಮಾನಗಳು ಸೇರಿದಂತೆ ಜೆಡ್ಡಾ ಮತ್ತು ಮಸ್ಕತ್ ಗೆ ತಮ್ಮ ನಿಯಮಿತ ಸೇವೆಗಳನ್ನು ನಿರ್ವಹಿಸಲಿವೆ. ಏರ್ ಇಂಡಿಯಾ ವಿಮಾನವು ದೆಹಲಿ ಮತ್ತು ಮುಂಬೈನಿಂದ ತಲಾ ಒಂದು ರಿಟರ್ನ್ ಸೇವೆಯನ್ನು ನಿರ್ವಹಿಸಲಿದ್ದು, ಏರ್ ಇಂಡಿಯಾ ಎಕ್ಸ್ ಪ್ರೆಸ್ ಬೆಂಗಳೂರು, ಹೈದರಾಬಾದ್ ಮತ್ತು ಕೋಝಿಕ್ಕೋಡ್ ನಿಂದ ಹಾರಾಟ ನಡೆಸಲಿದೆ.

<><><><>

ಮಕ್ಕಳ ಮರಣ ಅಂದಾಜು ಕುರಿತ ವಿಶ್ವಸಂಸ್ಥೆಯ ಅಂತರ-ಏಜೆನ್ಸಿ ಗುಂಪು-ಐಜಿಎಂಇ ೨೦೨೫ ವರದಿಯ ಪ್ರಕಾರ ಭಾರತವು ಮಕ್ಕಳ ಬದುಕುಳಿಯುವಿಕೆಯಲ್ಲಿ ಜಾಗತಿಕ ಮಾದರಿಯಾಗಿ ಹೊರಹೊಮ್ಮಿದೆ. ನವಜಾತ ಶಿಶುಗಳ ಮರಣ ಪ್ರಮಾಣವು ೧೯೯೦ ರಲ್ಲಿ ೧ ಸಾವಿರ ಜೀವಂತ ಜನನಗಳಿಗೆ ೫೭ ಸಾವುಗಳಿಂದ ೨೦೨೪ ರಲ್ಲಿ ೧೭ ಕ್ಕೆ ಸುಮಾರು ಶೇಕಡಾ ೭೦ ರಷ್ಟು ಕಡಿಮೆಯಾಗಿದೆ ಎಂದು ವರದಿ ತಿಳಿಸಿದೆ. ಇದು ತಾಯಿ ಮತ್ತು ನವಜಾತ ಶಿಶುಗಳ ಆರೋಗ್ಯ ಸೇವೆಗಳಲ್ಲಿ ನಿರಂತರ ಸುಧಾರಣೆಗಳನ್ನು ಪ್ರತಿಬಿಂಬಿಸುತ್ತದೆ. ಅಂತೆಯೇ, ೫ ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವು ಶೇಕಡಾ ೭೯ ರಷ್ಟು ಕಡಿಮೆಯಾಗಿದೆ, ಇದು ೧೯೯೦ ರಲ್ಲಿದ್ದ ೧೨೭ ರಿಂದ ೨೦೨೪ ರಲ್ಲಿ ೨೭ ಕ್ಕೆ ಇಳಿದಿದೆ. ವಿಶೇಷ ನವಜಾತ ಶಿಶು ಆರೈಕೆ ಘಟಕಗಳು, ಜನನಿ ಸುರಕ್ಷಾ ಯೋಜನೆ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಮತ್ತು ವಿಸ್ತೃತ ರೋಗನಿರೋಧಕ ಕಾರ್ಯಕ್ರಮಗಳಂತಹ ಪ್ರಮುಖ ಉಪಕ್ರಮಗಳನ್ನು ಬಿಂಬಿಸಿದ ಕೇಂದ್ರ ಆರೋಗ್ಯ ಸಚಿವ ಜಗತ್ ಪ್ರಕಾಶ್ ನಡ್ಡಾ, ಈ ಪರಿವರ್ತನೆಗೆ ಚಾಲನೆ ನೀಡುವಲ್ಲಿ ಮತ್ತು ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಇದು ನಿರ್ಣಾಯಕ ಪಾತ್ರ ವಹಿಸಿದೆ ಎಂದು ಹೇಳಿದ್ದಾರೆ. ನವಜಾತ ಶಿಶುಗಳ ಆರೈಕೆಗೆ ದೇಶದ ಕೇಂದ್ರೀಕೃತ ಮತ್ತು ಸಮಗ್ರ ವಿಧಾನವು ತಡೆಗಟ್ಟಬಹುದಾದ ಮಕ್ಕಳ ಸಾವುಗಳನ್ನು ತೊಡೆದುಹಾಕಲು ಮತ್ತು ರಾಷ್ಟ್ರದ ಮಕ್ಕಳಿಗೆ ಆರೋಗ್ಯಕರ ಭವಿಷ್ಯವನ್ನು ಖಾತ್ರಿಪಡಿಸಲು ದಾರಿ ಮಾಡಿಕೊಡುತ್ತಿದೆ ಎಂದು ಸಚಿವರು ಒತ್ತಿ ಹೇಳಿದ್ದಾರೆ.

<><><><>

ಫ್ರಾನ್ಸ್ ನ ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಆಯುಷ್ ಶೆಟ್ಟಿ ೧೬ರ ಘಟ್ಟಕ್ಕೆ ಮುನ್ನಡೆದಿದ್ದಾರೆ. ನಿನ್ನೆ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಆರಂಭಿಕ ಪಂದ್ಯದಲ್ಲಿ ಆಯುಷ್, ಸಹ ಸ್ಪರ್ಧಿ ಕಿರಣ್ ಜಾರ್ಜ್ ಅವರನ್ನು ಸೋಲಿಸಿದರು. ಈ ಮಧ್ಯೆ, ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಅನ್ಮೋಲ್ ಖಾರ್ಬ್ ತನ್ವಿ ಶರ್ಮ, ಮಾಳವಿಕಾ ಬನ್ಸೋಡ್ ಮತ್ತು ಇಶಾರಾಣಿ ಬರುವಾ ಸಹ ೧೬ರ ಘಟ್ಟಕ್ಕೆ ಮುನ್ನಡೆದಿದ್ದಾರೆ. ಅನ್ಮೋಲ್ ೨೧-೧೨, ೨೧-೧೭ ನೇರ ಗೇಮ್ ಗಳಿಂದ ಟರ್ಕಿಯ ನೆಸ್ಲಿಹಾನ್ ಅರಿನ್ ವಿರುದ್ಧ ಜಯ ಗಳಿಸಿದರೆ, ತನ್ವಿ ೨೧-೧೮, ೧೪-೧೨ರಲ್ಲಿ ಮುನ್ನಡೆಯಲ್ಲಿದ್ದಾಗ ಥಾಯ್ಲೆಂಡ್ ಆಟಗಾರ್ತಿ ಸುಪನಿದಾ ಹಿಂದೆ ಸರಿದರು. ಹೀಗಾಗಿ ತನ್ವಿ ಸುಲಭವಾಗಿ ಮುಂದಿನ ಸುತ್ತಿಗೆ ಮುನ್ನಡೆದಿದ್ದಾರೆ. ಈ ವೇಳೆ ಮಾಳವಿಕಾ ಚೈನೀಸ್

ತೈಪೆಯ ಎಸ್.ವೈ. ಸುಂಗ್ ವಿರುದ್ಧವು ಇಶಾರಾಣಿ ಡೆನ್ಮಾರ್ಕ್ ನ ಅಮಾಲಿ ಶುಲ್ಜ್ ವಿರುದ್ಧವು ಜಯ ಗಳಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>